OS No : 34/2015

P.W-2

## ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ

ದಿನಾಂಕಃ 25.09.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು ಃ 2(ಎ,ಡಿ, ಇ ) ನೇ ಪ್ರತಿವಾದಿ ಪರ ವಕೀಲರಿಂದ,**

ನನ್ನ ಮೂಲ ವಾಸಸ್ಥಳ ಕೊಟ್ಟೂರು. ಈಗ ನಾನು ದಾವಣಗೆರೆಯಲ್ಲಿ ವಾಸವಾಗಿರುತ್ತೇನೆ. ನನಗೆ ಮೂರು ಜನ ಗಂಡು ಮಕ್ಕಳಿರುತ್ತಾರೆ. ನನ್ನ ಯಜಮಾನರ ಹೆಸರು ಮಾಬುಸಾಬ್. ನನ್ನ ಯಜಮಾನರು ಅಡುಗೆ ಎಣ್ಣೆ ಮಿಲ್ ನ್ನು ನಡೆಸುತ್ತಿದ್ದರು. ಜಮಾನ್ ಸಾಬ್ ವಲಿ ಆಯಿಲ್ ಮಿಲ್ ಹಾಗೂ ಎಂ.ಎಂ ಆಯಿಲ್ ಮಿಲನ್ನು ನಡೆಸುತ್ತಿದ್ದರು. ನಮ್ಮ ಯಜಮಾನರು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಮಾನ್ಯ ತಹಸೀಲ್ದಾರ್ ಕೂಡ್ಲಿಗಿ ರವರಿಂದ ಆದೇಶ ಪಡೆದಿದ್ದರು ಎಂದರೆ ನನಗೆ ನೆನಪಿಲ್ಲ. ಭೋಗ್ಯೆದಾರ ಕಬುಲ್ಲಾ ಹುಸೇನ್ ಸಾಬ್, ಕೆ.ಮಹಮ್ಮದ್ ಉಸ್ತಾಫ್ ಹಾಗೂ ಮಹೆಬೂಬ್ ಇವರು ನನ್ನ ಸಂಬಂಧಿಕರು. ದಿನಾಂಕ 24.01.1992 ರಂದು ಎಂ.ಎಂ ಆಯಿಲ್ ಮಿಲನ್ನು ನಾನು ಸದರಿ ರವರಿಗೆ ಲೀಜ್ ಡೀಡ್ ನ್ನು ಬರೆದುಕೊಟ್ಟಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲೀಜ್ ಡೀಡ್ ಮೂಲಕ ಸದರಿ ಆಸ್ತಿಯನ್ನು ನಾನು ಸದರಿ ರವರಿಗೆ ಬಿಟ್ಟು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಕಬುಲ್ಲಾ ಹುಸೇನ್ ಸಾಬ್, ಕೆ.ಮಹಮ್ಮದ್ ಉಸ್ತಾಫ್ ಹಾಗೂ ಮಹೆಬೂಬ್ ರವರು ಕೆ.ಎಸ್.ಎಫ್.ಸಿ ಯಿಂದ 15 ಲಕ್ಷ ರೂ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ, ನನ್ನ ಮಗ ಮಹೆಬೂಬ್, ರಾಜು ಹಾಗೂ ಚಮನ್ ಸಾಲ ಪಡೆದಿದ್ದರು. ಕೆ.ಎಸ್.ಎಫ್.ಸಿ ಯಿಂದ ಸಾಲವನ್ನು ಮರು ಪಾವತಿ ಮಾಡಲಿಲ್ಲವೆಂದು ಅವರು ಮಿಲ್ ನ್ನು ಹರಾಜಿಗೆ ಇಟ್ಟಿದ್ದರು ಎಂದರೆ ಮೊಸದಿಂದ ಹರಾಜಿಗೆ ಇಟ್ಟಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಕೆ.ಎಸ್.ಎಫ್.ಸಿ ಯವರು ನನ್ನ ಬಳಿ ಬಂದು ಪಡೆದಿದ್ದ 15 ಲಕ್ಷ ಸಾಲವನ್ನು ಮರುಪಾವತಿಸಲಾಗಿರುತ್ತದೆ ಎಂದು ಹೇಳಿರುತ್ತಾರೆ. ವಾದಿಯರು ಯಾರ ವಿರುದ್ಧ ಕೇಸು ದಾಖಲು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಅದು ವಾದಿಯರಿಗೆ ಗೊತ್ತು. ಮೃತ 2 ನೇ ಪ್ರತಿವಾದಿ ಯಾರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಹೊರತು ಪಡಿಸಿ ಉಳಿದ ಆಸ್ತಿಗಳನ್ನು ಯಾರಿಗೆ ಮಾರಾಟ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

ದಿನಾಂಕ 16.12.2002 ಸರ್ವೆ ನಂ 512, 513 ಹಾಗೂ 514 ರ ಒಟ್ಟು ವಿಸ್ತೀರ್ಣ 2.64 ಸೆಂಟ್ಸ್ ಆಸ್ತಿಯನ್ನು ಕರಡಿ ಕೊಟ್ರಯ್ಯನಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಸದರಿ ಹಣವನ್ನು ನಾನು ಕೆ ಎಸ್ ಎಫ್ ಸಿ ರವರಿಗೆ ಕೊಟ್ಟಿದ್ದೇನು.

ಸದರಿ ಆಸ್ತಿಯ ಚೆಕ್ಕುಬಂದಿಯ ಉತ್ತಕ್ಕೆ ಜಿನ್ನಿಂಗ್ ಫ್ಯಾಕ್ಟರಿ ಇದೆ ಎಂಬುವುದಾಗಿ ಬರೆದಿದೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**